# *Form No.4.*

## *Deposition Sheet( R.P.52)*

ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ.

**CC : 4/2025**

**CW3**

**PW3**

| | | |
|---|---|---|
| ಸಾಕ್ಷಿಯ ಹೆಸರು | ಃ | ಮಹೇಶ್ |
| ತಂದೆ ಹೆಸರು | ಃ | ಸಂಜೀವ ಪೂಜಾರಿ |
| ಪ್ರಾಯ | ಃ | 36 ವರ್ಷ |
| ಉದ್ಯೋಗ | ಃ | ಮೆಕ್ಯಾನಿಕ್ ಕೆಲಸ |
| ವಾಸ | ಃ | ಶಿರ್ಲಾಲು |

ದಿನಾಂಕ **: 04.07.2025** ರಂದು ಪಿಡಬ್ಲ್ಯೂ - 3/ಸಿಡಬ್ಲ್ಯೂ - 3 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ ಹಿರಿಯ ಸ.ಸ.ಅ. ರವರಿಂದಃ

ಆರೋಪಿತರ ಪರಿಚಯವಿದೆ. ಈಗ ನನಗೆ ನಿಪಿ - 1 ಮತ್ತು ನಿಪಿ - 4 ರಲ್ಲಿ ನನ್ನ ಸಹಿ ಇರುತ್ತದೆ. ನನ್ನ ಸಹಿಗಳನ್ನು ಕ್ರಮವಾಗಿ ನಿಪಿ - 1(ಸಿ) ಮತ್ತು ನಿಪಿ - 4(ಸಿ) ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ಪೋಲೀಸರು ಕೆರ್ವಾಶೆಯಲ್ಲಿ ಸಹಿ

ಮಾಡಲು ಹೇಳಿದ್ದು, ಸಹಿ ಮಾಡಿದ್ದೇನೆ. ನಿಪಿ - 1 ಮತ್ತು 4 ರಲ್ಲಿ ಬರೆದಿರುವ ವಿಚಾರಗಳು ತಿಳಿದಿರುವುದಿಲ್ಲ. ನಿಪಿ - 3 ಮತ್ತು ನಿಪಿ - 5 ಫೋಟೋಗಳಲ್ಲಿ ನಾನು ಇದ್ದೇನೆ. ನಿಪಿ - 3 ಮತ್ತು ನಿಪಿ - 5 ನ್ನು ಯಾವ ಕಾರಣದಿಂದ ತೆಗೆಯಲಾಗಿದೆ ಎಂದು ನನಗೆ ತಿಳಿದಿಲ್ಲ. ಪೋಲೀಸರು ನನ್ನ ಸಮಕ್ಷಮ ಯಾವುದೇ ಮಹಜರು ಮಾಡಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿರುವುದಿಲ್ಲ.

ಈ ಹಂತದಲ್ಲಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಬೇಕು ಎಂದು ಹಿರಿಯ.ಸ.ಸ.ಅ. ರವರು ಕೋರಿದ್ದು, ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.

ಪಾಟೀ ಸವಾಲುಃ ಪಿ.ಎ.ಎಸ್. 1 ನೇ ಆರೋಪಿತರ ಪರ ವಕೀಲರಿಂದಃ

ದಿಃ 06.04.2024 ರಂದು ಪೋಲೀಸರು ನನ್ನನ್ನು ಮತ್ತು ಚಾಸಾ 2 ರವನ್ನು ಕೆರ್ವಾಶೆ ಗ್ರಾಮದ ಕೊಡಮಣಿತ್ತಾಯ ಬ್ರಹ್ಮ ಬೈದರ್ಕಳ ಗರಡಿ ಬಳಿ ಕರೆಸಿದ್ದರು ಎಂದರೆ , ನಾನು ಅಲ್ಲಿ ಕೆಲಸಕ್ಕೆ ಹೋಗುತ್ತಿದ್ದೆ. ನಮ್ಮ ಸಮಕ್ಷಮ ಕೆಎ 20 ಸಿ 3207 407 ಟೆಂಪೋ ಮತ್ತು ಅದರಲ್ಲಿದ್ದ ಮರಳು, ಮೂರು ರಬ್ಬರ್ ಬುಟ್ಟಿ ಹಾಗೂ ಮೂರು ಕಬ್ಬಿಣದ ಹಾರೆ ಮತ್ತು 3 ಜನ ಆರೋಪಿತರನ್ನು ನನ್ನ ಮತ್ತು ಚಾಸಾ 3 ರವರ ಸಮಕ್ಷಮ ನಿಪಿ - 3 ರಂತೆ ಫೋಟೋ ತೆಗೆದಿರುತ್ತಾರೆ ಎಂದರೆ

ಸರಿಯಲ್ಲ. ಅದೇ ದಿನ 1 ನೇ ಆರೋಪಿ ತಾವು ಮರಳು ತೆಗೆದ ಜಾಗ ಎಂದು ತೋರಿಸಲಾದ ಸ್ಥಳಕ್ಕೆ ಕರೆದುಕೊಂಡು ಹೋಗಿ ನಿಪಿ - 4 ರಂತೆ ಮಹಜರು ಮಾಡಿ, ನಿಪಿ - 5 ರಂತೆ ಫೋಟೋ ತೆಗೆದಿರುತ್ತಾರೆ ಎಂದರೆ, ಫೋಟೋ ತೆಗೆದಿದ್ದು, ಎಲ್ಲಿ ತೆಗೆದಿರುತ್ತಾರೆ ಎಂದು ನನಗೆ ತಿಳಿದಿಲ್ಲ. ಇವತ್ತು ಆರೋಪಿತರು ನನ್ನನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾರೆ. ನಾನು ಆರೋಪಿತರು ಹೇಳಿಕೊಟ್ಟಂತೆ ಈ ದಿನ ನ್ಯಾಯಾಲಯದಲ್ಲಿ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರಗಳು ತಿಳಿದಿದ್ದರೂ ಸಹಾ ನಾನು ನನ್ನ ಸಮಕ್ಷಮ ಮಹಜರು ಮಾಡಿ ಫೋಟೋಗಳನ್ನು ತೆಗೆದಿದ್ದರೂ ಸಹಾ ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ.,

ಕಾರ್ಕಳ.